**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 462 ಎಸಿಎಂ(2) 2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:13-08-2013.

**-:: ಸು ತ್ತೋಲೆ ::-**

**ವಿಷಯ:** 2013-14ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಗೆ ಅನುಗುಣವಾದ ಕೋರ್ಸುಗಳ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಅವಧಿ ವಿಸ್ತರಿಸುವ ಕುರಿತು.

**ಉಲ್ಲೇಖ:**
1. ಸಕಾರದ ಪತ್ರ ಸಂ. ಇಡಿ 171 ಟಪಿಇ 2013, ದಿನಾಂಕ:06-08-2013.
2. ಈ ಕಛೇರಿ ಸುತ್ತೋಲೆ ಸಂ. ಡಿಟಿಇ/462/ಎಸಿಎಂ(2)/2012-13, ದಿನಾಂಕ:06-08-2013.

-000000-

ಉಲ್ಲೇಖ(2)ರ ಈ ಕಛೇರಿ ಸುತ್ತೋಲೆಯಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ಆಯಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ **ಆಫ್-ಲೈನ್** ಮುಖಾಂತರ ಅರ್ಜಿಗಳನ್ನು ವಿತರಿಸಿ ಹಾಗೂ ಮೆರಿಟ್ ಪಟ್ಟಿ ತಯಾರಿಸಿ ಅಭ್ಯರ್ಥಿಗಳ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ರೋಸ್ಟರ್ ಅನುಗುಣವಾಗಿ ನಿಯಮಗಳನ್ನು ಪಾಲಿಸಿ ತುಂಬಲು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಈ ಕೆಳಕಂಡಂತೆ ಅವಧಿಯನ್ನು ವಿಸ್ತರಿಸಿ ಅನುಮತಿ ನೀಡಲಾಗಿರುತ್ತದೆ.

ಮುಂದುವರೆದಂತೆ, ಈಗಾಗಲೇ ಎಲ್ಲಾ 11 ನೋಡಲ್ ಸೆಂಟರ್‌ಗಳ ಮುಖಾಂತರ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆದುಕೊಂಡು ಸದರಿ ಸಂಸ್ಥೆಗಳಿಗೆ ಇಲ್ಲಿಯವರೆಗೂ ಪ್ರವೇಶ ಪಡೆಯದಿರುವ ವಿದ್ಯಾರ್ಥಿಗಳು ದಿನಾಂಕ:13-08-2013ರ ಸಂಜೆ 5.30ರ ಒಳಗೆ ಪ್ರವೇಶ ಪಡೆಯತಕ್ಕದ್ದು. ಪ್ರವೇಶ ಪಡೆಯದೆ ಇದ್ದ ಪಕ್ಷದಲ್ಲಿ, ಅಂತಹ ಸೀಟುಗಳನ್ನು ರದ್ದುಪಡಿಸಿ ದಿನಾಂಕ:14-08-2013 ರಂದು ನಡೆಯುವ ಸಂದರ್ಶನಕ್ಕೆ ಕೆಲವು ಸಂಸ್ಥೆಗಳಲ್ಲಿ ಖಾಲಿ ಇರುವ ಸೀಟುಗಳನ್ನು ತುಂಬಲು ಉಲ್ಲೇಖ(1)ರ ಪತ್ರದಲ್ಲಿ ಸರ್ಕಾರವು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಪ್ರಾಚಾರ್ಯರ ಹಂತದಲ್ಲಿಯೇ ತುಂಬಿಕೊಳ್ಳಲು ಅವಕಾಶ ನೀಡಿರುವ ಸೀಟುಗಳ ಜೊತೆಯಲ್ಲಿಯೇ ಪ್ರವೇಶ ಪಡೆದು ರದ್ದಾಗಿರುವ ಸೀಟುಗಳನ್ನೂ ಸಹ ತುಂಬಲು ಪ್ರಾಚಾರ್ಯರುಗಳಿಗೆ ಪ್ರವೇಶ ನೀಡಲು ಅನುಮತಿ ನೀಡಲಾಗಿದೆ.

**ಸಹಿ/-**
**ನಿರ್ದೇಶಕರು**

ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ
ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ